doc-540
T-P-2

Reg No 3 G 155 5—9—72

55th Year of Publication ★ 'Satyavadi' daily, Mysore 4

In State - The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವಚ್ಛ ಣ ಗ
ಮಹೋತ್ಸವ
ಸಂವತ್ಸರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆದಾಯ ಆಧಾರದ ಮೇಲೆ ಭೂ ಮಿತಿ ಇರಬೇಕು

ಇಂಡಿಯಾದ ಸಾಂಸ್ಕೃತಿಕ ಚಿತ್ರವಸ್ತು ಪ್ರದರ್ಶನ

ಎಸ್ಸೆಲಿಂರ್ಜೆ (ಡಾಡ್)— ಫೆಡರಲ್ ರಿಪಬ್ಲಿಕ್ ಜರ್ಮನಿಯಲ್ಲಿನ ಎಸ್ಸೆಲಿಂರ್ಜನಲ್ಲಿ ನಡೆಸಿದ ಇಂಡಿಯಾ ಚಿತ್ರಪಸ್ತು ಗಳ ಪ್ರದರ್ಶನವು "ಅತ್ಯಾಶ್ಚರ್ಯ" ವೆಂದು ಹೆಸರು ಗಳಿಸಿದೆ. ಇಂಡಿಯಾದ ಸಾಂಸ್ಕೃತಿಕ ಮಂತ್ರಿ ವಿಭಾಗದಿಂದ ಜರ್ಮನ್ ಇಂಡಿರ್ಯ ಸೊಸೈಟಿಯ ಆಶ್ರಯದಲ್ಲಿ ಏರ್ಪಡಿಸಿದ್ದ ಈ ಪ್ರದರ್ಶನದಲ್ಲಿ 400 ಅಮೂಲ್ಯ ವಸ್ತು ಗಳನ್ನು ಪ್ರದರ್ಶಿಸಲಾಗಿತ್ತು. (ಯೂ ಪಿ ಎಸ್)

ಉದ್ಯೋಗ ವಿನಿಮಯ ಕೇಂದ್ರ ಗಳು

ನವದೆಹಲಿ— ಭಾರತದಲ್ಲಿ 488 ಉದ್ಯೋಗ ವಿನಿಮಯ ಕೇಂದ್ರಗಳಿವೆ ; ಇವುಗಳಲ್ಲಿ 51 ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರಗಳೂ, 15 ತಾಂತ್ರಿಕ ಉದ್ಯೋಗ ವಿನಿಮಯ ಕೇಂದ್ರಗಳೂ, 7 ಕಲ್ಲಿದ್ದಲುಗಣಿ ಉದ್ಯೋಗ ಕೇಂದ್ರಗಳೂ ಇವೆ.

ರೈತ ಮತ್ತು ಕಾರ್ಮಿಕ ಸೇವಾ ಸಂಘ,

ರೈತ ಮತ್ತು ಕಾರ್ಮಿಕ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ. ಜಂಬೂ ಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದ, ರೈತ ಮತ್ತು ಕಾರ್ಮಿಕ ಸೇವಾ ಸಂಘದ ಕಾರ್ಯ ಕಾರಿ ಸಮಿತಿ ನಿರ್ಣಯಸ್ತೋಪನ್ನು ಅಂಗೀಕರಿಸಿ, ಭಾರತ ಮತ್ತು ಪಾಕೀಸ್ತಾನದ ನಿರ್ಮಾ ಒಪ್ಪಂದ ಸರಿಯಲ್ಲ, ಈ ಸಂಬಂಧದ ಚಳುವಳಿಯಲ್ಲಿ ಬಂಧಿತರಾಗಿರುವವರನ್ನು ಬಿಡುಗಡೆ ಮಾಡಬೇಕೆಂದು ಈ ಸಭೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಒತ್ತಾಯ ಮಾಡುತ್ತದೆ.

ಬಾಂಗ್ಲಾ ತೆರಿಗೆಯನ್ನು ಸರ್ಕಾರ ಈ ಕೂಡಲೇ ರದ್ದು ಮಾಡಬೇಕೆಂದು ಈ ಸಭೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಒತ್ತಾಯ ಮಾಡುತ್ತದೆ.

ಸುಗ್ಗಿ ಕಾಲದಲ್ಲಿ ರೈತರಿಂದ ಲೆವಿ ಧಾನ್ಯವನ್ನು ಮೈಸೂರು ಸರ್ಕಾರ ಪಡೆದು, ಮತ್ತೆ ಈಗ ಮನೆಗಳಿಗೆ, ಮಿಲ್‌ಗಳಿಗೆ ನುಗ್ಗಿ ಧಾನ್ಯವನ್ನು ತೆಗೆದುಕೊಳ್ಳುತ್ತಿರುವುದನ್ನು ಈ ಸಭೆ ಪರಿಶೀಲಿಸಿ, ಇದನ್ನು ಸರ್ಕಾರ ಈ ಕೂಡಲೇ ಕೈ ಬಿಡಬೇಕೆಂದು, ರೈತರಲ್ಲಿ ಅಸಮಾಧಾನ ಉಂಟು ಮಾಡಬಾರದೆಂದು, ಈ ಸಭೆ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರನ್ನು ಒತ್ತಾಯ-ಪಡಿಸುತ್ತದೆ-

ಸುಪ್ರಸಿದ್ಧ ಸರ್ವ ಭಾಷಾ ತಾರೆ ಶ್ರೀಮತಿ ಪಿ ಜಯಂತಿಯವರಿಗೆ, ಅವರ ಕಲಾ ಪ್ರೌಢಿಮೆಗಾಗಿ ಈ ವೇಳೆಗಾಗಲೇ ಸರ್ಕಾರ ಸನ್ಮಾನ ಮಾಡಬೇಕಾಗಿದ್ದಾಗ್ಯೂ ಆ ಬಗ್ಗೆ ಉದಾಸೀನ ಭಾವನೆಯನ್ನು ಸರ್ಕಾರ ತಾಳಿರುವ ಬಗ್ಗೆ, ಈ ಸಭೆ ವಿಷಾದ ವ್ಯಕ್ತಪಡಿಸಿ, ಕೂಡಲೇ ಅವರಿಗೆ ಸನ್ಮಾನ ಮಾಡಬೇಕೆಂದು ಈ ಸಭೆ ಒತ್ತಾಯ ಪಡಿಸುತ್ತದೆ.

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ಕಾಂಗ್ರೆಸ್ ಭೂ ಸುಧಾರಣಾ ಮಂಡಲಿಯ ಶಿಫಾರಸು ಪ್ರಕಾರ 18 ಸ್ಟ್ಯಾಂಡರ್ಡ್ ಎಕರೆ ಭೂಮಿ ಹೊಂದಲು ಅವಕಾಶ ಇದ್ದಾಗ್ಯೂ, ಮೈಸೂರಿನ ಶ್ರೀ ಡಿ. ದೇವರಾಜ ಅರಸ್ ರವರ ಸರ್ಕಾರ 15 ಎಕರೆಗೆ ಮಿತಿ ಮಾಡಹೊರಟಿರುವುದನ್ನು ಈ ಸಭೆ ವಿರೋಧಿಸಿ, 18 ಸ್ಟ್ಯಾಂಡರ್ಡ್ ಎಕರೆ ಭೂಮಿಯನ್ನು ಮಿತಿ ಮಾಡಬೇಕೆಂದು ಈ ಸಭೆ ಒತ್ತಾಯಪಡಿಸುತ್ತದೆ. ಹಾಗೇನಾದರೂ ಆಗದಿದ್ದಲ್ಲಿ ರಾಜ್ಯದ ರೈತರು ಭಾರಿ ಚಳುವಳಿ ಹೂಡಲು, ಕಾರಾಗೃಹಕ್ಕೆ ಹೋಗಲು ಸಿದ್ಧವೆಂದು ಈ ಸಭೆ ಅಭಿಪ್ರಾಯ ಪಡುತ್ತದೆ.

ಕಪ್ಪು ಹಣ

ನವದೆಹಲಿ— 1972 ರ ಚುನಾವಣಾನಂತರ ಸರಕಾರವು ಹಣದ ಅಪಮೌಲ್ಯದ ವಿಷಯದಲ್ಲಿ ವಾಂಚೂ ಕಮಿಟಿ ಶಿಫಾರಸನ್ನು ಸರಕಾರ ಹೆಚ್ಚುಕಡಮೆ ಒಪ್ಪಿತ್ತಿಂದೂ, ಹೊಸ ನೋಟುಗಳನ್ನು ಮುದ್ರಿಸಲಾಗಿತ್ತೆಂದೂ, ಆದರೆ ಪ್ರಧಾನಿ ಅನುಮತಿ ನೀಡಲಿಲ್ಲವೆಂದೂ ಕಮ್ಯುನಿಸ್ಟ್ ಸದಸ್ಯ ಜೋತಿರ್ಮಯಿ ಬಾಸು ಲೋಕಸಭೆಯಲ್ಲಿ ಆಪಾದಿಸಿದರು — ರೂ. 20 ನೋಟುಗಳನ್ನು ಹೊರಡಿಸಲು ಕಾರಣವಿಲ್ಲವೆಂದರು — ರೂ. 20 ನೋಟು ಮತ್ತು ಮತ್ತು 10 ರೂ ಗಳ ನಾಣ್ಯಗಳನ್ನು ಕಪ್ಪು ಹಣ ಶೇಖರಿಸುವವರು ಶೇಖರಿಸುತ್ತಿರುವರೆಂದರು.

★

ವಿಷಮಿಶ್ರಿತ ಆಹಾರ

ಮಂಡ್ಯ— ಇಲ್ಲಿಯ ಒಂದು ಸಮಾರಂಭದಲ್ಲಿ ಆಹಾರ ಸೇವಿಸಿದವರಲ್ಲಿ 5 ಮಕ್ಕಳು ಸತ್ತು 35 ಮಂದಿ ಆಸ್ಪತ್ರೆಯಲ್ಲಿ ತೀವ್ರ ಸ್ಥಿತಿಯಲ್ಲಿ ಬಿದ್ದಿರುವರು.

●

ಅಪಾರ ಮುದ್ದು ವಶ

ಹೈದರಾಬಾದು— ಕ್ರಾಂತಿಕಾರಿ ಕಮ್ಯುನಿಸ್ಟ್ ಪ್ರಮುಖ ಸದಸ್ಯನ ಬಂಧನದಿಂದ ಖಮ್ಮಾಮ್ ಜಿಲ್ಲಾ ಬಗ್ಗಾ ಕಣಿವೆಯ ದಟ್ಟ ಅಡವಿಯಲ್ಲಿನ ಗುಹೆಯೊಂದರಲ್ಲಿ ಮುಚ್ಚಿಟ್ಟಿದ್ದ ಅಪಾರ ಮದ್ದಿನ ರಾಶಿಯು ಪತ್ತೆಯಾಯಿತು.

★

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ ॥ ಎಂ. ಸಿ ಮೋದಿಯವರು [ಭಾರತ ಧ್ಯಕ್ಷರ ಗೌ ॥ ನೇತ್ರ ವೈದ್ಯರು] ತುಮಕೂರು ಜಿಲ್ಲಾ ತಿಪಟೂರಿನಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ತಾ ॥ 8 ರಂದು ನಡೆಸುವರು.

ರೈಲ್ವೆ ನೌಕರರ ಗೈರುಹಾಜರಾತಿ

ಮದರಾಸು— ಓಡಾಡುವ ರೈಲುಗಳ ನೌಕರರ ಸಾಮೂಹಿಕ ಗೈರುಹಾಜರಾಗಿರುವದರಿಂದ ರೈಲ್ವೇ ಓಡಾಟ ಕುಂಠಿತಗೊಂಡಿದೆ - ಅನೇಕ ರೈಲುಗಳನ್ನು ರದ್ದುಗೊಳಿಸಲಾಗಿದೆ. ಈ ಕಾರ್ಯ ನ್ಯಾಯಬಾಹಿರವಾಗಿರುವುದೆಂದು ಘೋಷಿಸಲಾಗಿರುವದರ ಜೊತೆಗೆ, ಪ್ರಯಾಣೀಕರಿಗೂ ಎಚ್ಚರಿಕೆ ನೀಡಲ್ಪಾಗಿದೆ.

★

ಇದೂ ಒಂದು ಗಣನೀಯ ಪಾಯಿಂಟ್

ಬಿಜಾಪುರ— ಆದಾಯದ ಆಧಾರದ ಮೇಲೆ ಭೂಮಿ ಪರಿಮಿತಿ ಇರಬೇಕೆಂದು ಲೋಕೋಪಯೋಗಿ ಮಂತ್ರಿ ಶ್ರೀ ಚನ್ನಬಸಪ್ಪನವರು ಬಹಿರಂಗ ಸಭೆಯಲ್ಲಿ ಹೇಳಿದರು — ಕಾರ್ಖಾನೆ ಕಾರ್ಮಿಕರಿಗೆ ಕನಿಷ್ಠ ಆದಾಯದ ಭರವಸೆ ಇರುವಂತೆ, ರೈತರಿಗೂ ಹಾಗೆ ಭರವಸೆ ಇರಬೇಕೆಂದರು.

★

ಸಂಸ್ಕೃತಕ್ಕೆ ಸ್ಥಾನ

ಮೈಸೂರು— ಸದ್ವಿದ್ಯಾಶಿಲಾಶತಮಾನೋತ್ಸವ ಸಂಬಂಧದಲ್ಲಿ ನಿನ್ನೆ ಅಧ್ಯಕ್ಷತೆ ವಹಿಸಿದ್ದ ವಿದ್ಯಾಭ್ಯಾಸ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಮರಿರಾಜ್ ರವರು ವಿದ್ಯಾಭ್ಯಾಸ ಕ್ರಮದಲ್ಲಿ ಸಂಸ್ಕೃತಕ್ಕೆ ಸೂಕ್ತ ಸ್ಥಾನ ಕೊಡಲ್ಪಡಬೇಕು, ಎಂದು ಹೇಳಿದರು.

★

ರೈಲ್ವೇ ಲೈನ್ ಉದ್ಘಾಟನೆ

ಮದರಾಸು— ತಿರುವೇಂಡ್ರಂ, ನಾಗರಕೋಯಿಲ್, ಕನ್ಯಾಕುಮಾರಿ, ಮತ್ತು ತಿರುನೆಲ್ವೆಲ್ಲಿಗಳಿಗೆ ಸಂಬಂಧ ಕಲ್ಪಿಸುವ ಹೊಸ ರೈಲ್ವೇ ಲೈನ್ ನಿರ್ಮಾಣದ ಉದ್ಘಾಟನೆಯನ್ನು ಪ್ರಧಾನಿ ಇಂದಿರಾ ಗಾಂಧಿಯವರು ಕನ್ಯಾಕುಮಾರಿಯಲ್ಲಿ ತಾ ॥ 6 ರಂದು ನೆರವೇರಿಸುವರು.

ಹೆಂಡತಿಯ ಮಾರಾಟ

ರಾಮಪುರ (ಉ. ಪ್ರ)— ಒಬ್ಬನು ಪೋಲೀಸು ಸ್ಟೇಷನ್ನಿಗೆ ಬಂದು, ತಾನು ತನ್ನ ಹೆಂಡತಿಯನ್ನು ಖೂನಿ ಮಾಡಿರುವುದಾಗಿಯೂ ತನ್ನನ್ನು ದಸ್ತಗಿರಿ ಮಾಡಬೇಕೆಂದೂ ಹೇಳಿದನು – ದಸ್ತಗಿರಿ ಮಾಡದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದನು – ಇವನ ಮಾತನ್ನು ನಂಬದಿದ್ದರೂ, ಅವನ ಜೊತೆ ಹೋಗಿ. ಶವ ಹೂತಿರುವ ಸ್ಥಳವೆಂದು ಅವನು ತೋರಿಸಿದ ಜಾಗವನ್ನು ಅಗೆಯಲು ಅಲ್ಲಿ ಏನೂ ಇರಲಿಲ್ಲ – ಕಡೆಗೆ ಪ್ರಶ್ನಿಸಲು, ಅವನು ತನ್ನ ಹೆಂಡತಿಯನ್ನು 900 ರೂ.ಗಳಿಗೆ ಮಾರಿದ್ದು ಗೊತ್ತಾಗಿ ಅವನನ್ನು ದಸ್ತಗಿರಿ ಮಾಡಿದರು.

★

ದೇವರನ್ನು ಕಾಣುವುದು ಸುಲಭ

ನವದೆಹಲಿ— ಮಂತ್ರಿಗಳ ಕಾಣಲು ಸಮಯ ಸಿಕ್ಕುವುದಕ್ಕಿಂತಲೂ, ದೇವರನ್ನು ಕಾಣುವುದು ಸುಲಭವೆಂದು, ಉತ್ತರ ಪ್ರದೇಶದ ಆಡಳಿತವನ್ನು ಟೀಕಿಸುತ್ತಾ ಪ್ರಧಾನಿಯವರೊಡನೆ ನಡೆಸಿದ ಚರ್ಚೆಯಲ್ಲಿ ಒಬ್ಬ ಸದಸ್ಯರು ಹೇಳಿದರು.

★

ಶ್ರೀ ಕೃಷ್ಣೋತ್ಸವ

ಟಿ. ನರಸೀಪುರದ ತಾಲ್ಲೋಕ ಕೃಷ್ಣಾಪುರದ ಶ್ರೀ ಸಂತಾನಗೋಪಾಲಕೃಷ್ಣ ಸ್ವಾಮಿಯವರಿಗೆ 1 ನೇ ತಾರೀಖು ಶುಕ್ರವಾರ ಪ್ರಾರಂಭವಾಗಿ 9 ನೇ ತಾರೀಖು ಶನಿವಾರ ಶುಭಮುಹೂರ್ತದಲ್ಲಿ ಶ್ರೀ ಗೋವಿಂದರಾಜ ಪಟ್ಟಾಭಿಷೇಕವೂ ಮತ್ತು ಸಾಯಂಕಾಲ 4 ಘಂಟೆಗೆ ಶ್ರೀ ರುಕ್ಮಿಣೀ ಕಲ್ಯಾಣೋತ್ಸವವೂ ನಡೆಯುತ್ತದೆ.

SHAKTI SUDHA

A Superb Tonic

ಅಖಿಲಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ 1-9-72 ರಿಂದ ಅಮೋಘ 2 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ

ಟಾಂಗೇವಾಲಾ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ — ರಾಜೇಂದ್ರ ಕುಮಾರ್ ವಹೀದಾ ರೆಹಮಾನ್ ಐ. ಎಸ್. ಜೋಹರ್
ಸಂಗೀತ – ನೌಷದ್ ನಿರ್ದೇಶನ – ನರೇಶ್ ಕುಮಾರ್

ಬೆಳಗಿನ ಪ್ರದರ್ಶನ 10-30 ಕ್ಕೆ ಜಾನ್ವರ್

ಅಪೆರಾ 31 8 72 ರಿಂದ

— ಆತ್ಮಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಬುಡಾ ಮಿಲ್ ಗಯಾ

ನಟವರ್ಗ— ನವೀನ್ ನಿಶ್ಚಲ್, ಅರ್ಚನಾ, ಸೋನಿಯಾ ಸಹಾನಿ
ಓಂ ಪ್ರಕಾಶ್, ಲಲಿತಾ ಪವಾರ್
ಪ್ರತಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

★

ಆನೆ-ಹುಡುಗ

Potect the Cow

Help The Gorakshana

— Humanitarian Propoganda Monthly ....

Contribute Liberally

to the National Defence Fund

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore